ಕಾಯಕನಾಥನಿಗೆ. ಹಾಗೇ ಯೋಚಿಸುತ್ತಾ ಅಲ್ಲೇ ಜಗುಲಿಯ ಮೇಲೆ ಅಡ್ಡಾದವನಿಗೆ ನಿದ್ದೆ ಹತ್ತಿದ್ದೇ ತಿಳಿಯಲಿಲ್ಲ.

'ಏಯ್ ಕಾಯ ಏನೋ ಇದೆಲ್ಲಾ?' ಯೋಗೀಶರ ದನಿಗೆ ಮಲಗಿದ್ದ ಕಾಯಕನಾಥ ಎದ್ದು ಕುಳಿತರೆ ಒಳಗೆ ಕೆಲಸದಲ್ಲಿ ನಿರತನಾಗಿದ್ದ ಜಂಪಯ್ಯ ಎದ್ದು ಹೊರಬಂದ. 'ಓಹ್ ಬಂದ್ರಾ ಯೋಗೀಶಣ್ಣ ಈ ಸಲ ತುಂಬ ತಡ ಮಾಡಿದಿರಿ ನೋಡಿ ನನ್ನ ಮನೆ? ಹೇಗಿದೆ?' ಸಂಭ್ರಮ ಮನೆ ಮಾಡಿತು ಜಂಪಯ್ಯನ ದನಿಯಲ್ಲಿ.

'ಈ ಮನೆ ಕಟ್ಟಲು ನಮ್ಮ ಕಾಡು ಲೂಟಿ ಮಾಡಿದಿರಲ್ವ? ಎಷ್ಟು ಮರ ಕಡಿದ್ರಿ? ಯಾವ ನೆಲ ಬಗೆದ್ರಿ?'

'ಅದು ಮಾಡದೇ ಮನುಷ್ಯ ಈ ಭೂಮಿ ಮೇಲೆ ಇರಲು ಸಾಧ್ಯನಾ ಯೋಗೀಶಣ್ಣ? ಈಗ ನೀವಿರೋ ಮನೇನೂ ಕಲ್ಲು ಸಿಮೆಂಟು ಮರಳಿನಿಂದಲೇ ಬಂದದ್ದು ತಾನೇ? ಅವೇನು ಮೇಲಿಂದ ಉದುರುತ್ತಾ? ಇಲ್ಲಿಯದೇ ತಾನೆ?' ಜಂಪಯ್ಯ ಆಕ್ಷೇಪಣೆಯ ದನಿಯಲ್ಲೆಂದ. ಯೋಗೀಶರು ಮಾತು ಬೆಳೆಸಲು ಇಚ್ಛಿಸಲಿಲ್ಲ. ಮನೆ ಒಳ ಬಂದು ನೋಡುವ ಶಾಸ್ತ್ರ ಮಾಡಿ ಎದ್ದು ಹೊರಬಂದರು.

'ಅಂತೂ ಕಾರಗದ್ದೇಗೆ ಹೋಗದೇ ಇಲ್ಲೇ ಉಳೀಬೇಕು ಅಂತ ನಿರ್ಧಾರ ಮಾಡಿದ್ದೀ ಅನ್ನು'

'ಹೌದಣ್ಣ ಇನ್ನು ಬದುಕು, ಸಾವು ಇಲ್ಲೇ!' ಜಂಪಯ್ಯ ದೃಢ ಸ್ವರದಲ್ಲೆಂದ. ಕಾಯಕನಾಥ ಮೌನವಾಗಿ ಕುಳಿತಿದ್ದ.

'ನಿಮ್ಮಿಷ್ಟ ಇನ್ಮೇಲೆ ನಿಮ್ಮ ತಂಟೇಗೆ ನಾನು ಬರಲ್ಲ. ಏನು ಬೇಕಾದರೂ ಮಾಡಿಕೊಳ್ಳಿ. ನಾನಿನ್ನು ಬರ್ತೇನೆ' ಯೋಗೀಶರು ಸಣ್ಣ ಅಸಮಾಧಾನ ಹೊತ್ತುಕೊಂಡು ಅಲ್ಲಿಂದ ಹೊರಟುಬಿಟ್ಟರು. ಇಬ್ಬರೂ ಏನು ಮಾಡಬೇಕೆಂದು ತೋಚದವರಂತೆ ತಟಸ್ಥರಾಗಿ ನೋಡುತ್ತಾ ಕುಳಿತಿದ್ದರು.

* * *

ಜಂಪಯ್ಯನಿಗೆ ಮನೆ ಕಟ್ಟಿಕೊಂಡು ನೆಲೆಸಿದ ಸಂತೃಪ್ತಿಯೇನೋ ಇತ್ತು. ಆದರೆ ಮಾನಸಿಕ ಸಂತೃಪ್ತಿಯೊಂದೇ ಬದುಕನ್ನು ಸಾಗಿಸದು. ಉದರ ತುಂಬದಿದ್ದರೆ ಜೀವನವಲ್ಲ, ಜೀವವೇ ಮುಂದೆ ಸಾಗದು! ಜಂಪಯ್ಯನಿಗೆ ಈಗ ಸಂಪಾದನೆಯ ಚಿಂತೆ ಹತ್ತಿತ್ತು. ಕಾಯಕನಾಥ ಅವನಿಂದ ದೂರವಿರಲು ಯತ್ನಿಸಿದಷ್ಟೂ, ಜಂಪಯ್ಯ ಅವನನ್ನು ಹತ್ತಿರ ಮಾಡಿಕೊಂಡಿದ್ದ. ಕಾಯಕನಾಥನಿಗೆ ಜಂಪಯ್ಯನ ಮನೆಯ ಜಗುಲಿಯೇ ಖಾಯಂ ಠಿಕಾಣಿಯಾಗಿತ್ತು. ಸೂರ್ಯ ಮುಳುಗಲು ಸನ್ನಿಹಿತವಾದೊಡನೆ ಜಂಪಯ್ಯ ಲಾಂದ್ರ ಬೆಳಗಿಸಿ ತಂದು ಮುಂಬಾಗಿಲ ಹೊಸ್ತಿಲಲ್ಲಿಡುತ್ತಿದ್ದ. ಅದರ ಬೆಳಕು ಮನೆಯ ಒಳಗೂ ಹೊರಗೂ ಮಂದವಾಗಿ ಹರಡಿದ್ದರೆ ಇಬ್ಬರೂ ತಂತಮ್ಮ ಬದುಕಿನ ಕ್ಷಣಗಳ ನೆನಪಿನ ತಿರುಗಣೆಯಲ್ಲಿ ತಿರುಗಿ ಬರುತ್ತಿದ್ದರು. ಇಬ್ಬರಿಗೂ ಹೊತ್ತು ಕಳೆಯಲು ದಿನದಲ್ಲಿ ನೆನಪು ಹರಳುಗಟ್ಟುವಂಥ ಯಾವುದೇ ಪ್ರಸಂಗವಿಲ್ಲದಿರುವಾಗ, ಮನಸ್ಸು ಸುಮ್ಮನೇ ಖಾಲಿ ಇರಗೊಡದೇ, ಹಿಂದಿನ ಓಣಿ ಹಿಡಿದು ಹಳೇ ನೆನಪುಗಳ ಸುತ್ತಿ ಬರುತ್ತಿತ್ತು. ದಿನದಲ್ಲಿ ಇಬ್ಬರ ನಡುವೆ ಮಾತೇ ಹೆಚ್ಚಾಗಿ ಮನಸ್ಸು ವ್ಯಸ್ತವಾಗುತ್ತಿದ್ದರಿಂದ ಕಾಯಕನಾಥ ತನ್ನ ದುಃಖ ಮರೆಯುತ್ತಿದ್ದನಾದರೂ, ಇರುಳು ಒಂಟಿತನದಲ್ಲಿ ಮಾತ್ರ ಮಿನಾಲಿ ಮತ್ತು ಮಗ ಸಾರಂಗ ಚಂದ್ರನ ಕಾಂತಿಯಾಗಿ, ಬೀಸಿ ಬಂದ ಗಾಳಿಯ ತಂಪಾಗಿ ಮನವನ್ನು ಆವರಿಸುತ್ತಿದ್ದರು. ತಾನು ಬದುಕಿರುವಾಗಲೇ ಅವರಿಬ್ಬರನ್ನು ಮಸಣ ಸೇರಿಸಿದ, ಕೈಯಾರೆ ಮಣ್ಣು ಮಾಡಿದ ಘೋರ ತಾಪ ಅವನನ್ನು ಒಳಗೇ ಸುಡುತ್ತಿತ್ತು. ಮಿನಾಲಿಯನ್ನು ಆ ಅಸೌಖ್ಯ ಸ್ಥಿತಿಯಲ್ಲಿ ರೈಲಿನಲ್ಲಿ ಕರೆತಂದದ್ದು, ಸಾರಂಗನ ವಿಷವೇರಿದ ದೇಹವನ್ನು ಕಿ.ಮೀ.ಗಟ್ಟಲೇ ಹೊತ್ತು ಆಸ್ಪತ್ರೆಗೆ ಸಾಗಿದ್ದ ಹೊರೆ ಅವರನ್ನು ಮಣ್ಣು ಮಾಡಿ ಬಂದರೂ ಅವನ ಮನದಿಂದ ಮಾತ್ರ ಇಳಿದಿರಲಿಲ್ಲ. ಆ ಹೊರೆಯ ನೋವು ಅವನು ಹೊತ್ತೇ ತಿರುಗುತ್ತಿದ್ದರಿಂದ ಆ ಮಸಣ ವೈರಾಗ್ಯ ಅವನನ್ನು ಆವರಿಸಿತ್ತು. ಬದುಕನ್ನು ಪ್ರೀತಿಸಲು ಅಥವಾ ಅದು ಸಹ್ಯವೆನಿಸಲು ನೆಪಗಳಾದರೂ ಏನಿದ್ದವು? ಜೀವನ ಇಷ್ಟೇ ಎನಿಸಿದಾಗ ಎಲ್ಲದರಿಂದ ಮೋಹ ಕಳಚಿತ್ತು.

ಆದರೆ, ಜಂಪಯ್ಯನಿಗೆ ಈಗಷ್ಟೇ ಬದುಕು ಶುರುವಾದಂತೆ ಭಾಸವಾಗಿತ್ತು. ಅದನ್ನು ಸುಂದರಗೊಳಿಸಲು, ಸರಿಯಾಗಿ ಒಂದು ಶಿಸ್ತಿಗೆ ಊರ್ಜಿತಗೊಳಿಸಲು ಅವನು ಯೋಜನೆಗಳನ್ನು ಹಾಕುತ್ತಿದ್ದ. ಹಿತ್ತಲಿನಲ್ಲಿ ಈಗಷ್ಟೇ ಗಿಡಗಳು ಚಿಗುರಲಾರಂಭಿಸಿದ್ದರೂ, ನೆಲದ ಮಣ್ಣು ಸ್ವಲ್ಪ ಗಡುಸಾಗಿದ್ದರಿಂದ ಅದರ ಸಾರ ಹೀರಲು ಗಿಡಗಳು ಶಕ್ತವಾಗಿರದೆ ಬಾಡಿ ಹೋದಂತಾಗಿದ್ದವು. ಅವು ಬೆಳೆದು ಹಿರಿದಾಗಿ ಹೂ ಹಣ್ಣು ಕಾಯಿ ಬಿಟ್ಟು ಅದನ್ನು ತಾನು ಮಾರಿ ಅದರಿಂದ ಬದುಕು ಅವಲಂಬಿಸುವುದು ದೂರದ ಮಾತು ಎಂಬ ವಾಸ್ತವ ಅವನಿಗೆ ಮನವರಿಕೆಯಾಗಲು ಹೆಚ್ಚು ದಿನ ಬೇಕಾಗಲಿಲ್ಲ. ಕಾಡಿನ ಕೆಲವು ಹಣ್ಣು ತಿಂದು ಬದುಕು ಸಾಗಿಸಿದರೂ ಅದೂ ಕೂಡಾ ಹೆಚ್ಚು ಮುಂದುವರೆಸಲು ಸಾಧ್ಯವಿಲ್ಲ ಎನಿಸಿದ ಸ್ಥಿತಿ ಎದುರಾದಾಗ ಬೇರೆ ದಾರಿ ಹುಡುಕುವುದು ಜಂಪಯ್ಯನಿಗೆ ಅನಿವಾರ್ಯವಾಯಿತು. ಅದನ್ನೇ ಕಾಯಕನಾಥನ ಬಳಿ ಹೇಳಿಕೊಂಡ ಜಂಪಯ್ಯ.

'ಮತ್ತೆ... ಈಗ ಏನು ಮಾಡು ಅಂತೀಯಾ? ಮನೆ ಕಟ್ಟುವ ಉತ್ಸಾಹದಲ್ಲಿ ಇದೆಲ್ಲ ಯೋಚಿಸಲಿಲ್ಲವಾ ನೀನು?'

'ಮನೇಗೂ ಇದಕ್ಕೂ ಏನು ಸಂಬಂಧ? ಮನೆ ಇಲ್ಲದಾಗಲೂ ಬದುಕು ಹೋಗಲಿಲ್ಲವಾ?'



'ಆಗ ಕಾರಗದ್ದೇಲಿದ್ದೆ. ಈಗ ಇದು ಅಜ್ಜರಕಾಡು ಆಗ ನಿನಗೆ ಅಲ್ಲಿ ಊರು ತುಂಬಾ ಬಂಧುಗಳಿದ್ದರು. ಈಗ ಇಲ್ಲಿ ನಿನಗೆ ಈ ಕಾಡೇ ಬಂಧು. ಇಲ್ಲೇನು ಮಾಡಲು ಸಾಧ್ಯ...?'' ಕಾಯಕನಾಥ ಅವನ ಚಿಂತೆಯ ಭಾರವನ್ನು ಮತ್ತಷ್ಟು ಹೆಚ್ಚಿಸುವಂತೆ ಮಾತನಾಡಿದ.

'ಈ ಕಾಡೇ ಬಂಧುವಾದರೆ, ಇದೇ ಏನಾದರೂ ದಾರಿ ಮಾಡಿಕೊಡುತ್ತದೆ. ಏನಂತೀಯಾ ಕಾಯ ನಾವು ಮಾರ್ಗವನ್ನು ಹುಡುಕಬೇಕಷ್ಟೇ'

ಜಂಪಯ್ಯ ಹೊರಗೆ ಆವರಿಸಿದ ಕತ್ತಲಿನಲ್ಲಿ ಏನಾದರೂ ಬದುಕಿನ ದಾರಿಗೊಂದು ಬೆಳಕನ್ನು ಅರಸುವಂತೆ ನೋಡುತ್ತ ನುಡಿದ. ಅಂಥ ಯಾವ ಚಿಂತೆಯೂ ಕಾಯಕನಿಗೆ ಇರಲಿಲ್ಲವಾದ್ದರಿಂದ ಅವನು ನಿರುಮ್ಮಳನಾಗಿ ನಿದ್ರೆಗೆ ಜಾರಿದ. ಆದರೆ ಜಂಪಯ್ಯನಿಗೆ ಮಾತ್ರ ನಿದ್ದೆ ಸುಳಿಯಲಿಲ್ಲ. ಬೆಳಗ್ಗೆದ್ದು ಇಡೀ ಅಜ್ಜರಕಾಡಿನ ಇಂಚಿಂಚು ಯಾವುದೋ ನಿಧಿ ಶೋಧಿಸುವಂತೆ ಅಲೆದಾಡಿದ. ಯಾವುದೋ ಗುಂಗಿನಲ್ಲಿ ಮುಳುಗಿದವನಂತಿದ್ದ. ಕ್ರಮೇಣ ಅದು ಕಾಯಕನಾಥನ ಗಮನಕ್ಕೂ ಬಂದಿತು.

'ಅದೇನು... ಇಡೀ ಜಾಗಕ್ಕೆ ಸುತ್ತು ಬರ್ತಿದ್ದೀಯಾ? ಇಡೀ ಜಾಗದಲ್ಲಿ ಮನೆ ಕಟ್ಟಬೇಕು ಅಂತಿದ್ದೀಯ...? ಆಗ ಅದು ಮನೆ ಆಗಲ್ಲ ಕೋಟೆ ಆಗುತ್ತೆ ಗೊತ್ತಾ?' ಕಾಯಕನಾಥ ಹಾಸ್ಯ ಮಾಡಿದ.

'ಅದಲ್ಲ... ಇಲ್ಲಿ ನೆಲದ ಮಣ್ಣು ಸ್ವಲ್ಪ ಗಟ್ಟಿ ಅಲ್ವಾ ಹಾಗಾಗಿ ಈ ಅಜ್ಜರಕಾಡು ಸ್ವಲ್ಪ ಬಯಲಾಗಿಯೇ ಉಳಿದಿದೆ.. ಪಕ್ಕದಲ್ಲೇ ಕಾಡು ಇದೆ. ನದೀನೂ ಇದೆ. ಹಾಗಾಗಿ ಅಂತರ್ಜಲ ಇದೆ. ಆದರೆ ಮಣ್ಣಿನ ಗುಣ ಸ್ವಲ್ಪ ಗಡಸು. ಹಾಗಾಗಿ ಈ ಕಾಡಿನ ಹಕ್ಕಿಗಳು ಬೀಳಿಸುವ ಬೀಜಗಳಿಂದಲೂ ಇಲ್ಲಿ ಮರ, ಗಿಡಗಳು ಬೆಳೆದಿಲ್ಲ. ಇಲ್ಲಿ ಯಾವ ಬೆಳೆ ಬೆಳೀಬಹುದು ಅಂತ ಆಲೋಚನೆ ಮಾಡ್ತಿದೀನಿ...'

'ಅಲ್ಲಾ ಜಂಪಯ್ಯ ಇದು ಬೇರೆಯವರ ಜಾಗ. ಇಲ್ಲಿ ನೀನು ಬೆಳೆ ಬೆಳೆಯಲು ಸಾಧ್ಯವಾ? ಅವ್ರು ನಾಳೆ ಬಂದರೆ...?'

'ಆಗ ನೋಡಿದರಾಯ್ತು... ಈಗ್ಯಾಕೆ ಆ ಚಿಂತೆ? ನಾನು ಈಗ ಕಾರಗದ್ದೆಗೆ ಹೋಗಿ ಸ್ವಲ್ಪ ವಿಚಾರ ವಿನಿಮಯ ಮಾಡಿಕೊಂಡು ಬರ್ತೀನಿ!' ಜಂಪಯ್ಯ ನಿಂತ ಕಾಲಲ್ಲೇ ಹೊರಟು ಬಿಟ್ಟ. ಜಂಪಯ್ಯನಿಗೆ ಏನಾದರೂ ತಲೆಗೆ ಬಂದರೆ ಅದು ಕಾರ್ಯರೂಪಕ್ಕೆ ಬರದೇ ಅವನು ಸಮಾಧಾನದಿಂದ ಕೂರುವವನಲ್ಲ ಎಂದು ಕಾಯನಿಗೂ ಈಗ ಮನವರಿಕೆಯಾಗಿತ್ತು. ಹಾಗಾಗಿ ಅವನು ತಡೆಯಲು ಹೋಗಲಿಲ್ಲ. ಹಾಗೆ ಬೆಳಿಗ್ಗೆ ಬಿಸಿಲೇರುವ ಮುನ್ನವೇ ಕಾರಗದ್ದೆಗೆ ಹೋಗಿದ್ದ ಜಂಪಯ್ಯ ಬರುವಾಗ ಸಂಜೆಯಾಗಿತ್ತು. ಕತ್ತಲಲ್ಲಿ ತಿರುಗಾಡಲು ಟಾರ್ಚ್ ಖರೀದಿ ಮಾಡಿದ್ದ. ಜೊತೆಗೆ ಬೇರೊಬ್ಬ ವ್ಯಕ್ತಿಯನ್ನೂ ಜೊತೆಗೆ ಕರೆತಂದಿದ್ದ.

'ಇವನು ಶಿವಣ್ಣ ನಮ್ಮ ಕಾರಗದ್ದೇಲಿ ಅನಂತಣ್ಣನ ತೋಟದಲ್ಲಿ ಕೆಲಸ ಮಾಡೋನು. ಇವನಿಗೆ ಎಲ್ಲ ಮಾಹಿತಿ ಇದೆ. ಶ್ರಮ ಜೀವಿ. ನನ್ನ ಹಳೇ ಪರಿಚಯ.' ಶಿವಣ್ಣನನ್ನು ಕಾಯಕನಾಥನಿಗೆ ಪರಿಚಯ ಮಾಡಿಕೊಟ್ಟ ಜಂಪಯ್ಯ. ಕಾಯಕನಾಥನಿಗೆ ಏಕೋ